**ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ನಿಯಮಗಳು, 1992**

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 (1991 ರ ಕರ್ನಾಟಕ ಅಧಿನಿಯಮ ಸಂಖ್ಯೆ 7) ರ ಕಲಂ 13 ರ ಉಪ- ಕಲಂ (1) ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಏನೆಂದರೆ:-

1. **ಹೆಸರು ಮತ್ತು ಪ್ರಾರಂಭ** – (1) ಈ ನಿಯಮಗಳನ್ನು **ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ನಿಯಮಗಳು, 1992** ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅವುಗಳು ಅಧಿಕೃತವಾಗಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನದಿಂದ ಜಾರಿಗೆ ಬರುತ್ತವೆ.

2. **ಪರಿಭಾಷೆಗಳು**- (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು-

(1) **"ಅಧಿನಿಯಮ'** ಎಂದರೆ, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 (1991 ರ ಕರ್ನಾಟಕ ಅಧಿನಿಯಮ ಸಂಖ್ಯೆ 7);

**(2) "ಶೈಕ್ಷಣಿಕ ಸಂಸ್ಥೆ"** ಎಂದರೆ, ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಅಥವಾ ಅನುದಾನ ನೀಡಿದ ಶಿಕ್ಷಣ ಸಂಸ್ಥೆ;

**(3) 'ಸಾರ್ವಜನಿಕ ವಲಯ ಸಂಸ್ಥೆಗಳು"** ಎಂದರೆ, "ಅಧಿನಿಯಮದಲ್ಲಿ" ಪರಿಭಾಷಿಸಲಾದ ಸಂಸ್ಥೆಗಳು;

**(4) "ಜಾತಿ ಪರಿಶೀಲನಾ ಸಮಿತಿ"** ಎಂದರೆ, [1][ನಿಯಮ 4ರ ಅನುಸಾರವಾಗಿ ರಚಿತವಾದ ಒಂದು ಸಮಿತಿ ಮತ್ತು ಒಂದು ಹೆಚ್ಚುವರಿ ಸಮಿತಿ;]

**(5) "ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ'** ಎಂದರೆ. [2][ನಿಯಮ 5ರ ಅನುಸಾರವಾಗಿ ರಚಿತವಾದ ಒಂದು ಸಮಿತಿ ಮತ್ತು ಒಂದು ಹೆಚ್ಚುವರಿ ಸಮಿತಿ;]

**(6) "ನಮೂನೆ"** ಎಂದರೆ, ಈ ನಿಯಮಗಳಿಗೆ ಸೇರಿಸಲಾದ ನಮೂನೆ;

**(7) "ತನಿಖಾಧಿಕಾರಿ"** ಎಂದರೆ, ಈ ಅಧಿನಿಯಮದ ಕಲಂ 7 ರ ಉಪ-ಕಲಂ (2) ರನ್ವಯ ಸರ್ಕಾರದಿಂದ ಅಧಿಕೃತಗೊಳಿಸಲ್ಪಟ್ಟ ಅಧಿಕಾರಿ;

**(8) "ಸಿಂಧುತ್ವ ಪ್ರಮಾಣ ಪತ್ರ"** ಎಂದರೆ, ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯಿಂದ ನೀಡಲ್ಪಟ್ಟ ಪ್ರಮಾಣ ಪತ್ರ;

---

1. ನಿಯಮ" 4ರನ್ವಯ ರಚಿತವಾದ ಸಮಿತಿ"ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿನಾಂಕ : 08.02.2000 ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ : 28.02.2000ದಿಂದ ಜಾರಿಗೆ ಬಂದಿದೆ.

2. "ನಿಯಮ 5 ರನ್ವಯ ರಚಿತವಾದ ಸಮಿತಿ'' ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿನಾಂಕ : 08.02.2000 ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ : 28.02.2000ದಿಂದ ಜಾರಿಗೆ ಬಂದಿದೆ.

(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿಲ್ಲದ ಇತರ ಪದಗಳು ಮತ್ತು ಅಭಿವ್ಯಕ್ತಿಗಳಿಗೆ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ ಭರ್ತಿ) ನಿಯಮಗಳು, 1977 ರಲ್ಲಿರುವ ಅರ್ಥವೇ ಇರತಕ್ಕದ್ದು.

3. **ಮೀಸಲಾತಿ-** ಈ ಅಧಿನಿಯಮ ಕಲಂ 4 ರ ಉದ್ದೇಶಕ್ಕಾಗಿ ಈ ನಿಯಮಗಳು ಜಾರಿಗೆ ಬರುವ ಆ ದಿನಾಂಕದವರೆಗೂ ಮೀಸಲಾತಿಯ ಬಗ್ಗೆ ರಾಜ್ಯ ಸರ್ಕಾರದಿಂದ ನೀಡಲಾಗಿರುವ ಕಾರ್ಯನಿರ್ವಾಹಕ ಆದೇಶಗಳು ಈ ನಿಯಮಗಳ ಭಾಗಗಳೆಂದೇ ಪರಿಗಣಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದಿಂದ ಮಾರ್ಪಾಡು ಮಾಡುವವರೆಗೆ ಅಥವಾ ಬದಲಾಯಿಸುವವರೆಗೆ ಜಾರಿಯಲ್ಲಿರತಕ್ಕದ್ದು.

[1][3 ಎ. **ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳ ನೀಡಿಕೆ:-** (1) 4-ಎ ಪ್ರಕರಣದ ಅಡಿಯಲ್ಲಿ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳಿಗಾಗಿನ ಪ್ರತಿಯೊಂದು ಅರ್ಜಿಯು, ಕ್ಲೇಮಿನ ಸಮರ್ಥನೆಗಾಗಿ ಅಂಥ ದಸ್ತಾವೇಜುಗಳು ಮತ್ತು ಅವಶ್ಯಕವಾದ ಇತರೆ ವಿಷಯಗಳೊಡನೆ, ಸೂಕ್ತವಾಗಬಹುದಾದಂತೆ ಎ,ಬಿ, ಅಥವಾ ಸಿ ನಮೂನೆಗಳಲ್ಲಿ ಇರತಕ್ಕದ್ದು.

(2) ಅರ್ಜಿಯನ್ನು ಸ್ವೀಕರಿಸಿದ ನಂತರ, ತಹಶೀಲ್ದಾರನು, ಅರ್ಜಿದಾರನು ಒದಗಿಸಿರುವ ಮಾಹಿತಿಯನ್ನು, ದಸ್ತಾವೇಜುಗಳನ್ನು ಮತ್ತು ಅಂಥ ಅವಶ್ಯಕವಾದ ಇತರ ವಿಷಯಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ಪರಿಶೀಲನೆಯಿಂದ ಅರ್ಜಿದಾರನು ಒದಗಿಸಿರುವ ಮಾಹಿತಿ, ದಸ್ತಾವೇಜುಗಳು ಮತ್ತು ಸಾಕ್ಷ್ಯಗಳು ಸರಿಯಾಗಿವೆಯೆಂದು ಮನವರಿಕೆಯಾದ ನಂತರ, ಆತನು ಜಾತಿ ಪ್ರಮಾಣ ಪತ್ರವನ್ನು ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಸೂಕ್ತವಾಗಬಹುದಾದಂತೆ, ಡಿ, ಇ ಅಥವಾ ಎಫ್ ನಮೂನೆಗಳಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ನೀಡತಕ್ಕದ್ದು.

(3) ಅರ್ಜಿದಾರನು ಒದಗಿಸಿರುವ ಮಾಹಿತಿ, ದಸ್ತಾವೇಜುಗಳು ಅಥವಾ ಇತರ ದಾಖಲೆಗಳ ಸರಿತನದ ಬಗ್ಗೆ ತಹಶೀಲ್ದಾರನಿಗೆ ಮನವರಿಕೆಯಾಗದಿದ್ದಲ್ಲಿ, ಆತನು ಈ ಮುಂದಿನಂತೆ ವಿಚಾರಣೆಯನ್ನು ನಡೆಸಲು ಮುಂದುವರೆಯತಕ್ಕದ್ದು –

(ಎ) ತಹಶೀಲ್ದಾರನು ವಿಚಾರಣೆಯ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ನಿಗದಿ ಮಾಡಿದ ದಿನಾಂಕದಂದು ಎಲ್ಲಾ ದಸ್ತಾವೇಜುಗಳು ಮತ್ತು ಅರ್ಜಿದಾರನು ಹಾಜರುಪಡಿಸಲು ಬಯಸುವ ಇತರ ಎಲ್ಲಾ ವಿಷಯಗಳೊಂದಿಗೆ ಹಾಜರಾಗುವಂತೆ ತಿಳಿಸಿ ಅವನಿಗೆ ನೋಟೀಸನ್ನು ನೀಡತಕ್ಕದ್ದು;

(ಬಿ) ವಿಚಾರಣೆಯ ಸಮಯದಲ್ಲಿ ಆತನು ಶಾಲಾ ದಾಖಲೆಗಳನ್ನು ಜನನ ನೋಂದಣಿ ಪ್ರಮಾಣ ಪತ್ರ,ಯಾವುದಾದರೂ ಇದ್ದರೆ, ಅದನ್ನು ಮತ್ತು ಸಂಬಂಧಪಟ್ಟ ಅಂಥ ಇತರ ದಾಖಲೆಗಳನ್ನು ಪರೀಕ್ಷಿಸತಕ್ಕದ್ದು. ಅರ್ಜಿದಾರನು ಹಾಜರಾಗಿದ್ದರೆ ಆತನನ್ನು ಪರೀಕ್ಷಿಸತಕ್ಕದ್ದು ಮತ್ತು ಅರ್ಜಿದಾರನ ತಂದೆತಾಯಿ / ಪಾಲಕರನ್ನು ಮತ್ತು ಅರ್ಜಿದಾರನ ಮತ್ತು ಅವನ ತಂದೆತಾಯಿ/ ಪಾಲಕರ ಸಾಮಾಜಿಕ ಸ್ಥಾನಮಾನಗಳನ್ನು ತಿಳಿದಿರುವ ಇತರ ಯಾವೊಬ್ಬ ವ್ಯಕ್ತಿಯನ್ನು ಸಹ ಪರೀಕ್ಷಿಸಬಹುದು:

ಪರಂತು, ಅರ್ಜಿದಾರನು ಅನುಸೂಚಿತ ಬುಡಕಟ್ಟಿಗೆ ಸೇರಿದವನಾಗಿದ್ದ ಸಂಧರ್ಭದಲ್ಲಿ, ಮಾನವ ಶಾಸ್ತ್ರ ಮತ್ತು ಜನಾಂಗಕ್ಕೆ ಸಂಬಂಧಿಸಿದ ಗುಣಲಕ್ಷಣಗಳು, ದೇವತೆಗಳು, ಆಚರಣೆಗಳು, ಸಂಪ್ರದಾಯಗಳು, ವಿವಾಹ ಪದ್ಧತಿ, ಉತ್ತರ ಕ್ರಿಯೆಗಳು, ಶವಗಳನ್ನು ಹೂಳುವ ವಿಧಾನಗಳು ಮತ್ತು ಅಂಥ ಇತರೆ ವಿಷಯಗಳ ಬಗ್ಗೆ ಕೂಡ ತಹಶೀಲ್ದಾರನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

---

ನಿಯಮ 3 –ಎ ಇಂದ 3–ಸಿ ವರೆಗೆ ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿನಾಂಕ : 8.02.2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 28.02.2000ದಿಂದ ಜಾರಿಗೆ ಬಂದಿರುತ್ತದೆ.

(ಸಿ) ತಹಶೀಲ್ದಾರನು, ಅರ್ಜಿದಾರನು ಮತ್ತು ಆತನ ತಂದೆತಾಯಿಗಳು/ ಪಾಲಕರು ಅವರು ಯಾವ ಗ್ರಾಮ ಅಥವಾ ಪ್ರದೇಶಕ್ಕೆ ಸೇರಿರುವರೋ ಆಗ್ರಾಮ ಅಥವಾ ಪ್ರದೇಶದಲ್ಲಿ ತಮಟೆ ಬಾರಿಸುವ ಮೂಲಕ ಅಥವಾ ಇತರ ಯಾವುದೇ ಅನುಕೂಲಕರವಾದ ರೀತಿಯಲ್ಲಿ ಇತರ ಸಾರ್ವಜನಿಕ ನೋಟೀಸನ್ನು ನೀಡತಕ್ಕದ್ದು. ಅಂಥ ನೋಟೀಸಿಗೆ ಪ್ರತಿಕ್ರಿಯೆಯಾಗಿ ಅಥವಾ ಅನ್ಯಥಾ ಯಾವೊಬ್ಬ ವ್ಯಕ್ತಿ ಅಥವಾ ಸಂಘವು ಅರ್ಜಿದಾರನ ಕ್ಲೇಮನ್ನು ವಿರೋಧಿಸಿದರೆ, ಅಂಥ ವ್ಯಕ್ತಿ ಅಥವಾ ಸಂಘಕ್ಕೆ ವಿಚಾರಣೆಯ ಸಮಯದಲ್ಲಿ ಸಾಕ್ಷ್ಯವನ್ನು ಒದಗಿಸಲು ಅವಕಾಶವನ್ನು ಕೂಡ ನೀಡತಕ್ಕದ್ದು;

(ಡಿ) ಅರ್ಜಿದಾರನು ಮಾಡಿದ ಕ್ಲೇಮಿನ ನೈಜತೆಗೆ ಸಂಬಂಧಿಸಿದಂತೆ ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವೊಬ್ಬ ಅಧಿಕಾರಿಯ ಸಹಾಯವನ್ನು ತಹಶೀಲ್ದಾರನು ಪಡೆಯಬಹುದು;

(ಇ) ಅರ್ಜಿದಾರರು ಅಥವಾ ಅವರ ತಂದೆ-ತಾಯಿ/ ಪೋಷಕರ ವಾಸ ಸ್ಥಳವು, ತಹಶೀಲ್ದಾರರ ಅಧಿಕಾರ ವ್ಯಾಪ್ತಿ ಪ್ರದೇಶದೊಳಗೆ ಇರದಿದ್ದ ಸಂದರ್ಭದಲ್ಲಿ, ಆತನು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗೆ, ಅವರಲ್ಲಿ ಲಭ್ಯವಿರುವ ವೃತ್ತಿ ಸಂಬಂಧದ ಸಹಾಯವನ್ನು ನೀಡುವಂತೆ ಉಲ್ಲೇಖದ ಮೂಲಕ ಕೇಳಬಹುದು;

(ಎಫ್) ತಹಶೀಲ್ದಾರನು, ಅವಶ್ಯವೆಂದು ಭಾವಿಸಿದರೆ ಹೆಚ್ಚಿನ ಮಾಹಿತಿ, ದಸ್ತಾವೇಜು ಅಥವಾ ವಿಷಯಗಳನ್ನು ತರಿಸಿಕೊಳ್ಳಬಹುದು;

(ಜಿ) ತಹಶೀಲ್ದಾರನು, ಮೇಲೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ನಂತರ ಅರ್ಜಿಯನ್ನು ಸ್ವೀಕರಿಸಿದ ಎರಡು ತಿಂಗಳ ಒಳಗಾಗಿ, ಜಾತಿ ಪ್ರಮಾಣ ಪತ್ರವನ್ನು ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಡಿ, ಇ ಅಥವಾ ಎಫ್ ನಮೂನೆಯಲ್ಲಿ ನೀಡಬಹುದು ಅಥವಾ ಕ್ಲೇಮನ್ನು ತಿರಸ್ಕರಿಸಬಹುದು.

**3-ಬಿ. 4-ಎ ಪ್ರಕರಣದ ಅಡಿಯಲ್ಲಿ ಆದೇಶದ ವಿರುದ್ಧ ಅಪೀಲು :-** 4-ಬಿ ಪ್ರಕರಣದ ಅಡಿಯಲ್ಲಿಯ ಒಂದು ಅಪೀಲನ್ನು ಸ್ವೀಕರಿಸಿದ ನಂತರ, ಅಸಿಸ್ಟೆಂಟ್ ಕಮೀಷನರು, ತಹಶೀಲ್ದಾರರಿಂದ ದಾಖಲೆಗಳನ್ನು ಪಡೆದುಕೊಳ್ಳಬಹುದು ಮತ್ತು ಉಭಯ ಪಕ್ಷಕಾರರಿಗೂ ಸುನಾವಣೆಯ ಅವಕಾಶವನ್ನು ನೀಡಿದ ನಂತರ ಮತ್ತು ಅವಶ್ಯಕವಾದಲ್ಲಿ ಯಾವುದೇ ಸ್ಥಳೀಯ ವಿಚಾರಣೆ ನಡೆಸಿದ ನಂತರ, ಆ ಬಗ್ಗೆ ಕಾರಣಗಳನ್ನು ನೀಡಿ ಅಪೀಲನ್ನು ದಾಖಲು ಮಾಡಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಆದೇಶವನ್ನು ಹೊರಡಿಸಬಹುದು.

**3-ಸಿ. ತಹಶೀಲ್ದಾರನು ನೀಡಿದ ಪ್ರಮಾಣ ಪತ್ರದ ಸಿಂಧುತ್ವ** – (1) 4-ಎ ಪ್ರಕರಣದ ಅಡಿಯಲ್ಲಿ ನೀಡಿದ ಜಾತಿ ಪ್ರಮಾಣ ಪತ್ರವು, ಅದನ್ನು ರದ್ದುಪಡಿಸುವವರೆಗೆ ಅದು ಸಿಂಧುವಾಗಿರತಕ್ಕದ್ದು.

[1][(2) 4-ಎ ಪ್ರಕರಣದ ಮೇರೆಗೆ ನೀಡಲಾದ ಆದಾಯ ಮತ್ತು ಜಾತಿ ಪ್ರಮಾಣ ಪತ್ರವು ಐದು ವರ್ಷಗಳ ಅವಧಿಗೆ ಸಿಂಧುವಾಗಿರತಕ್ಕದ್ದು".

---

1. ಉಪನಿಯಮ(2) ನ್ನು ಅಧಿಸೂಚನೆ ಸಂಖ್ಯೆ : 155 ಬಿಸಿಎ 2011 ರ ಮೂಲಕ ದಿನಾಂಕ : 17.02.2012 ರನ್ವಯ ಪ್ರತಿಯೋಜಿಸಲಾಗಿದೆ.

[1][4. **ಜಾತಿ ಪರಿಶೀಲನಾ ಸಮಿತಿ**:-(1) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂಬಂಧದಲ್ಲಿ ನೀಡಲಾದ ಜಾತಿ ಪ್ರಮಾಣಪತ್ರದ ಪರಿಶೀಲನೆಗೆ ಪ್ರತಿಯೊಂದು ಜಿಲ್ಲೆಯಲ್ಲೂ ಜಾತಿ ಪರಿಶೀಲನಾ ಸಮಿತಿ ಎಂಬ ಸಮಿತಿಯು ಇರತಕ್ಕದ್ದು. ಈ ಸಮಿತಿಯು ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(1) ಜಿಲ್ಲೆಯ ಜಿಲ್ಲಾಧಿಕಾರಿಯು ಅಧ್ಯಕ್ಷರಾಗಿರತಕ್ಕದ್ದು;
(2) ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ (ಆಡಳಿತ);
(3) ತಾಲ್ಲೂಕಿನ ತಹಶೀಲ್ದಾರ್;
(4) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

[2][ಪರಂತು, ರಾಜ್ಯ ಸರ್ಕಾರವು, ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ನೀಡಲಾದ ಜಾತಿ ಪ್ರಮಾಣ ಪತ್ರದ ಸತ್ಯಾಪನೆಗಾಗಿ ಯಾವುದೇ ಜಿಲ್ಲೆಗೆ, ಈ ಮುಂದಿನ ಸದಸ್ಯರನ್ನು ಒಳಗೊಂಡ ಹೆಚ್ಚುವರಿ ಜಾತಿ ಪರಿಶೀಲನಾ ಸಮಿತಿಯೊಂದನ್ನು ರಚಿಸಬಹುದು, ಎಂದರೆ :-

| | | |
|---|---|---|
| (i) | ಸ್ಪೆಷಲ್ ಡೆಪ್ಯುಟಿ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ರಾಜ್ಯ ಸರ್ಕಾರವು ನೇಮಕ ಮಾಡಿದ ಒಬ್ಬ ಅಧಿಕಾರಿ | ಅಧ್ಯಕ್ಷರು |
| (ii) | ಉಪ-ವಿಭಾಗದ ಅಸಿಸ್ಟೆಂಟ್ ಕಮೀಷನರ್ | ಸದಸ್ಯರು |
| (iii) | ತಾಲ್ಲೂಕಿನ ತಹಶೀಲ್ದಾರ್ | ಸದಸ್ಯರು |
| (iv) | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು] |

**5. ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ-** ಇತರ ಹಿಂದುಳಿದ ವರ್ಗಗಳ ಸಂಬಂಧದಲ್ಲಿ ನೀಡಲಾದ ಜಾತಿ ಮತ್ತು ಪರಿಶೀಲನೆಗೆ ಪ್ರತಿಯೊಂದು ಜಿಲ್ಲೆಯಲ್ಲೂ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಎಂಬ ಸಮತಿಯು ಇರತಕ್ಕದ್ದು. ಈ ಸಮಿತಿಯು ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

1) ಜಿಲ್ಲೆಯ ಜಿಲ್ಲಾಧಿಕಾರಿಯು ಅಧ್ಯಕ್ಷರಾಗಿರತಕ್ಕದ್ದು;
2) ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಆಡಳಿತ);
3) ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್;
4) ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;]

[3][ಪರಂತು, ರಾಜ್ಯ ಸರ್ಕಾರವು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ನೀಡಲಾದ ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಸತ್ಯಾಪನೆಗಾಗಿ ಯಾವುದೇ ಜಿಲ್ಲೆಗೆ ಈ ಮುಂದಿನ ಸದಸ್ಯರುಗಳನ್ನು ಒಳಗೊಂಡ ಹೆಚ್ಚುವರಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪರಿಶೀಲನಾ ಸಮಿತಿಯೊಂದನ್ನು ರಚಿಸಬಹುದು, ಎಂದರೆ :-

| | | |
|---|---|---|
| (i) | ಸ್ಪೆಷಲ್ ಡೆಪ್ಯುಟಿ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ರಾಜ್ಯ ಸರ್ಕಾರವು ನೇಮಕ ಮಾಡಿದ ಒಬ್ಬ ಅಧಿಕಾರಿ | ಅಧ್ಯಕ್ಷರು |

---

1. ನಿಯಮಗಳು 4 ಮತ್ತು 5 ಅನ್ನು ಅಧಿಸೂಚನೆ ಸಂಖ್ಯೆ : ಸಕಸ 137 ಬಿಸಿಎ 93 ರ ಮೂಲಕ ದಿನಾಂಕ : 11-11-1993 ರನ್ವಯ ಪ್ರತಿಯೋಜಿಸಲಾಗಿದೆ.
2. ಪರಂತುಕವನ್ನು ಅಧಿಸೂಚನೆ ಸಂಖ್ಯೆ: : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ಮೂಲಕ ದಿ ፡ 08-02-2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 05.02.2000 ದಿಂದ ಜಾರಿಗೆ ಬಂದಿರುತ್ತದೆ.
3. ಪರಂತುಕವನ್ನು ಅಧಿಸೂಚನೆ ಸಂಖ್ಯೆ: : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ಮೂಲಕ ದಿ ፡ 08-02-2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 05.02.2000 ದಿಂದ ಜಾರಿಗೆ ಬಂದಿರುತ್ತದೆ.

(ii) ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್ ಸದಸ್ಯರು

(iii) ತಾಲ್ಲೂಕಿನ ತಹಶೀಲ್ದಾರ್ ಸದಸ್ಯರು

(iv) ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ ಸದಸ್ಯ ಕಾರ್ಯದರ್ಶಿ]

[1][**5-ಎ. ಜಾತಿ ಪರಿಶೀಲನಾ ಸಮಿತಿಯು ನೀಡಿದ ಪ್ರಮಾಣ ಪತ್ರದ ಸಿಂಧುತ್ವ** :- (1) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಯ ಹೆಸರಿನಲ್ಲಿ ಜಾತಿ ಪರಿಶೀಲನಾ ಸಮಿತಿಯು [2][xxx] ಉದ್ಯೋಗದ ಉದ್ದೇಶಕ್ಕಾಗಿ ನೀಡಿದ ಜಾತಿ ಪ್ರಮಾಣ ಪತ್ರದ ಸಿಂಧುತ್ವವು, ಅದನ್ನು ರದ್ದುಗೊಳಿಸುವವರೆಗೆ ಅಥವಾ ಅರ್ಜಿದಾರನು ತನ್ನ ಧಾರ್ಮಿಕ ನಿಷ್ಠೆಯನ್ನು ಬದಲಾಯಿಸುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಜಾರಿಯಲ್ಲಿರತಕ್ಕದ್ದು.

(2) ಹಿಂದುಳಿದ ವರ್ಗಗಳ ಪ್ರವರ್ಗ -Iಕ್ಕೆ ಸೇರಿದ ವ್ಯಕ್ತಿಯ ಹೆಸರಿನಲ್ಲಿ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ನೀಡಿದ ಪ್ರಮಾಣ ಪತ್ರದ ಸಿಂಧುತ್ವವು [3][xxx] ಉದ್ಯೋಗದ ಉದ್ದೇಶಕ್ಕಾಗಿ, ಆತನ ಜಾತಿಗೆ ಮೇಲು ಸ್ಥರದ (ಕ್ರೀಮಿಲೇಯರ್) ಮಾನದಂಡಗಳನ್ನು ಅನ್ವಯಿಸದೇ ಜಾತಿಗೆ ಮೀಸಲಾತಿ ಸೌಲಭ್ಯ ಲಭ್ಯವಿರುವವರೆಗೆ ಅಥವಾ ಅದನ್ನು ರದ್ದುಗೊಳಿಸುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಜಾರಿಯಲ್ಲಿರತಕ್ಕದ್ದು.]

**6. ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವುದು:-** ಉದ್ಯೋಗಕ್ಕಾಗಲಿ ಅಥವಾ ಪ್ರವೇಶಕ್ಕಾಗಲಿ ಮೀಸಲಾತಿ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯು ನಮೂನೆ – I ರಲ್ಲಿ ನಿಗದಿಪಡಿಸಿರುವ ಜಾತಿ ಅಥವಾ ಜಾತಿ ಮತ್ತು ಆದಾಯದ ಕೋರಿಕೆ (ಕ್ಲೇಮು) ಪರಿಶೀಲನೆಗಾಗಿ ;-

1. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಕೋರಿದ್ದಲ್ಲಿ ಪರಿಶೀಲನಾ ಸಮಿತಿಗೂ;
2. ಹಿಂದುಳಿದ ಬುಡಕಟ್ಟು ಅಥವಾ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರೆಂದು ಕೋರಿದ್ದಲ್ಲಿ ಜಾತಿ ಆದಾಯ ಪರಿಶೀಲನಾ ಸಮಿತಿಗೂ ಸಲ್ಲಿಸತಕ್ಕದ್ದು.

[4][**6-ಎ. ಜಾತಿ ಹಾಗೂ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯಿಂದ ಪರಿಶೀಲನೆ** :– ಜಾತಿ ಪರಿಶೀಲನಾ ಸಮಿತಿ ಅಥವಾ ಸಂದರ್ಭಾನುಸಾರ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು, ಸಿಂಧುತ್ವ ಪ್ರಮಾಣ ಪತ್ರದ ನೀಡಿಕೆಗಾಗಿ ಅರ್ಜಿಯನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗೆ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗೆ, ಸತ್ಯಾಪನೆಗಾಗಿ ಮತ್ತು ಸ್ಥಳೀಯ ವಿಚಾರಣೆ ನಡೆಸಿದ ನಂತರ ವರದಿ ಸಲ್ಲಿಸುವುದಕ್ಕಾಗಿ ಕಳುಹಿಸತಕ್ಕದ್ದು.]

---

1. 2012 ರ ಅಧಿನಿಯಮ ಸಂಖ್ಯೆ : 7 ರ ಮೂಲಕ ನಿಯಮ 5-ಎ ಅನ್ನು ದಿನಾಂಕ : 22.06.2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. "ವಿದ್ಯಾಭ್ಯಾಸ ಮತ್ತು" ಎಂಬ ಪದಗಳನ್ನು ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 3 ಎಸ್‌ಟಿಸಿ 2002 ರ ಮೂಲಕ ದಿನಾಂಕ : 15.02.2002 ರನ್ವಯ ಬಿಟ್ಟುಬಿಡಲಾಗಿದೆ ಮತ್ತು ದಿನಾಂಕ : 15.03.2002 ರಿಂದ ಜಾರಿಗೆ ಬಂದಿರುತ್ತದೆ.
3. ನಿಯಮ 6-ಎ ಅನ್ನು ಅಧಿಸೂಚನೆ ಸಂಖ್ಯೆ : : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ಮೂಲಕ ದಿ : 08-02-2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 05.02.2000 ದಿಂದ ಜಾರಿಗೆ ಬಂದಿರುತ್ತದೆ.

[1][7. **ಸಿಂಧುತ್ವ ಪ್ರಮಾಣ ಪತ್ರ ನೀಡಿಕೆ** :–(1) 6–ಎ ನಿಯಮದ ಅಡಿಯಲ್ಲಿ ಕಳುಹಿಸಿದ ಅರ್ಜಿಯ ಸಂಬಂಧದಲ್ಲಿ ವರದಿಯನ್ನು ಪಡೆದ ತರುವಾಯ, ಜಾತಿ ಪರಿಶೀಲನಾ ಸಮಿತಿ ಹಾಗೂ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು, ಸಂಬಂಧಪಟ್ಟ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ತರುವಾಯ ವಿಚಾರಣೆಯನ್ನು ನಡೆಸತಕ್ಕದ್ದು.

(2) ಸಮಿತಿಯು, ಶಾಲಾ ದಾಖಲೆಗಳನ್ನು ಜನನ ನೊಂದಣಿ ಪ್ರಮಾಣ ಪತ್ರ ಯಾವುದಾದರು ಇದ್ದರೆ ಅದನ್ನು ಮತ್ತು ಇತರೆ ಅಂಥ ಸಂಬಂಧಿಸಿದ ವಿಷಯಗಳನ್ನು ಪರೀಕ್ಷಿಸಬಹುದು ಮತ್ತು ಅರ್ಜಿದಾರನ ಸಮುದಾಯದ ಬಗ್ಗೆ ತಿಳಿದಿರುವ ಇತರೆ ಯಾವೊಬ್ಬ ವ್ಯಕ್ತಿಯನ್ನು ಸಹ ಪರೀಕ್ಷಿಸಿಬಹುದು:

ಪರಂತು, ಅರ್ಜಿದಾರನು ಅನುಸೂಚಿತ ಬುಡಕಟ್ಟಿಗೆ ಸೇರಿದ್ದರೆ, ಸಮಿತಿಯು, ಮಾನವ ಶಾಸ್ತ್ರ ಹಾಗೂ ಜನಾಂಗಕ್ಕೆ ಸಂಬಂಧಿಸಿದ ಗುಣಲಕ್ಷಣಗಳು, ದೇವತೆಗಳು, ಆಚರಣೆಗಳು, ಸಂಪ್ರದಾಯಗಳು, ವಿವಾಹ ಪದ್ಧತಿಗಳು, ಉತ್ತರ ಕ್ರಿಯೆಗಳು, ಶವಗಳನ್ನು ಹೂಳುವ ಪದ್ಧತಿಗಳು ಮತ್ತು ಅಂಥ ಇತರೆ ವಿಷಯಗಳನ್ನು ಕೂಡ ಪರೀಕ್ಷಿಸಬಹುದು.

(3) ಅಂಥ ವಿಚಾರಣೆಯ ತರುವಾಯ ಅರ್ಜಿದಾರನ ಕ್ಲೇಮು ನಿಜವೆಂದು ಸಮಿತಿಗೆ ಕಂಡುಬಂದರೆ, ಅದು ಕೋರಲಾಗಿದ್ದ ಪ್ರಮಾಣ ಪತ್ರವನ್ನು 1–ಎ ನಮೂನೆಯಲ್ಲಿ ನೀಡಬಹುದು. ಆದರೆ, ಅರ್ಜಿದಾರನು ಸುಳ್ಳು ಮನವಿಯನ್ನು ಸಲ್ಲಿಸುವ ಮೂಲಕ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವನೆಂದು ಸಮಿತಿಗೆ ತಿಳಿದುಬಂದರೆ, ಹಾಗೆ ತಿರಸ್ಕರಿಸುವುದಕ್ಕೆ ಇದ್ದ ಕಾರಣಗಳನ್ನು ತಿಳಿಸಿ ಅರ್ಜಿಯನ್ನು ತಿರಸ್ಕರಿಸುವ ಆದೇಶವನ್ನು ಹೊರಡಿಸತಕ್ಕದ್ದು. ಈ ಉಪ–ನಿಯಮದ ಅಡಿಯಲ್ಲಿ ಆದೇಶವನ್ನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಹೊರಡಿಸತಕ್ಕದ್ದು.

(4) (2) ಮತ್ತು (3) ನೇ ಉಪ–ನಿಯಮಗಳಲ್ಲಿ ಉಲ್ಲೇಖಿಸಿದ ವಿಚಾರಣೆಯನ್ನು ನಡೆಸಿದ ನಂತರವೂ ಕ್ಲೇಮು ಅನುಮಾನಾಸ್ಪದವೆಂದು ಸಮಿತಿಗೆ ಕಂಡು ಬಂದಲ್ಲಿ ಮತ್ತು ಒಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲದ ಪರಿಸ್ಥಿತಿಯಿದ್ದಲ್ಲಿ, ಅದು ವಿಷಯವನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ವಿವರವಾದ ತನಿಖೆ ಮತ್ತು ವರದಿಗಾಗಿ ಕಳುಹಿಸತಕ್ಕದ್ದು. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದಿಂದ ವರದಿಯನ್ನು ಸ್ವೀಕರಿಸಿದ ನಂತರ ಸಮಿತಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತೆ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಅರ್ಜಿದಾರನಿಗೆ ಸುನಾವಣೆಗಾಗಿ ಅವಕಾಶವನ್ನು ನೀಡಿದ ತರುವಾಯ, ಪ್ರಕರಣವನ್ನು ಗುಣದೋಷಗಳ ಆಧಾರದ ಮೇಲೆ ವಿಲೆ ಮಾಡತಕ್ಕದ್ದು. ಈ ಉಪನಿಯಮದ ಅಡಿಯಲ್ಲಿ ಆದೇಶವನ್ನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಹೊರಡಿಸತಕ್ಕದ್ದು.

(5) ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ ಆದೇಶದಿಂದ ಬಾಧಿತವಾದ ಯಾವೊಬ್ಬ ವ್ಯಕ್ತಿಯು, ಡಿವಿಜನಲ್ ಕಮಿಷನರನಿಗೆ ಅಫೀಲನ್ನು ಸಲ್ಲಿಸಬಹುದು. ಅಂಥ ಅಫೀಲನ್ನು ಸಲ್ಲಿಸಿದ ದಿನಾಂಕದಿಂದ ನಲವತ್ತೈದು ದಿನಗಳೊಳಗೆ, ಡಿವಿಜನಲ್ ಕಮಿಷನರ್ ಅವರು, ಉಭಯ ಪಕ್ಷಕಾರರಿಗೆ ಸುನಾವಣೆಗಾಗಿ ಅವಕಾಶವನ್ನು ನೀಡಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅಂಥ ಆದೇಶವನ್ನು ಹೊರಡಿಸತಕ್ಕದ್ದು.]

---

1. ನಿಯಮ 7ನ್ನು ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 132 ಎಸ್ಎಡಿ 97 ನ್ನು ದಿ : 08–02–2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 05.02.2000 ದಿಂದ ಜಾರಿಗೆ ಬಂದಿರುತ್ತದೆ.

[1][7-ಎ. **ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿದ್ದಕ್ಕಾಗಿ ಪ್ರಾಸಿಕ್ಯೂಷನ್ ನಡೆಸುವುದು**-(1) ಸಂದರ್ಭಾನುಸಾರ ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಮತ್ತು ಡಿವಿಜನಲ್ ಕಮೀಷನರು, ಸಿಂಧುತ್ವ ಪ್ರಮಾಣ ಪತ್ರದ ನೀಡಿಕೆಗಾಗಿನ ಅರ್ಜಿದಾರನ ಕ್ಲೇಮನ್ನು ತಿರಸ್ಕರಿಸಿ ಹೊರಡಿಸಿದ ಆದೇಶದ ಪ್ರತಿಯನ್ನು ಸಂದರ್ಭಾನುಸಾರ ಅಂಥ ಕ್ಲೇಮನ್ನು ತಿರಸ್ಕರಿಸಿದ ಬಗ್ಗೆ ಅಪೀಲಿನ ಮೇಲೆ ಆದೇಶದ ಪ್ರತಿಯನ್ನು ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು.

(2) ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯವು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿರುವ ಅಂಥ ಕ್ಲೇಮುದಾರನ ಮೇಲೆ ಪ್ರಾಸಿಕ್ಯೂಷನ್ ನಡೆಸತಕ್ಕದ್ದು.

7-ಬಿ. **ಸುಳ್ಳು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಪಡೆದುಕೊಂಡ ಆರ್ಥಿಕ ಪ್ರಯೋಜನಗಳನ್ನು ಹಿಂದಕ್ಕೆ ಪಡೆಯುವುದು-** ಸರ್ಕಾರವು ಅಥವಾ ಇತರ ಯಾವುದೇ ಏಜನ್ಸಿಯು ಸುಳ್ಳು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ವಿದ್ಯಾರ್ಥಿ ವೇತನದ, ಅನುದಾನದ, ಭತ್ಯೆಗಳ ಅಥವಾ ಇತರೆ ಆರ್ಥಿಕ ಪ್ರಯೋಜನಗಳ ರೂಪದಲ್ಲಿ ಯಾವೊಬ್ಬ ವ್ಯಕ್ತಿಗೆ ಯಾವುದೇ ಮೊಬಲಗನ್ನು ಸಂದಾಯ ಮಾಡಿದ್ದರೆ, ಯಾವುದೇ ಇತರ ಕ್ರಮಕ್ಕೆ ಬಾಧಕವಾದಂತೆ, ಅಂಥ ವ್ಯಕ್ತಿಯಿಂದ ಅದನ್ನು ವಸೂಲು ಮಾಡಿಕೊಳ್ಳಲು ಅವನು ಬದ್ಧನಾಗಿರತಕ್ಕದ್ದು.]

[2][8. **ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾವಕಾಶ- [xxx].**

9. **ನೇಮಕಾತಿ-** ಸಿಂಧುತ್ವ ಪ್ರಮಾಣ ಪತ್ರ ಪಡೆಯದ ಯಾವುದೇ ವ್ಯಕ್ತಿಯನ್ನು ಸರ್ಕಾರದ ಸೇವೆಗಾಗಲಿ ಅಥವಾ ಹುದ್ದೆಗಾಗಲಿ ಇಲ್ಲವೆ ಸಾರ್ವಜನಿಕ ಕ್ಷೇತ್ರದ ಕಾರ್ಯ ಸಂಸ್ಥೆಗಾಗಲಿ ನೇಮಕ ಮಾಡತಕ್ಕದ್ದಲ್ಲ.

[3][9-ಎ. **ಪರಿಶೀಲನಾ ಸಮಿತಿ :- [xxx].**

[4][10. **ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ಕ್ರಮ ಕೈಗೊಳ್ಳಲು ಅಧಿಕಾರ ಇತ್ಯಾದಿ-(1)** ಅಧಿನಿಯಮ ಮತ್ತು ನಿಯಮಗಳ ವಿವಿಧ ಉಪಬಂಧಗಳ ಉಲ್ಲಂಘನೆಗಾಗಿ ಕ್ರಮ ಕೈಗೊಳ್ಳಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಸಂಬಂಧದಲ್ಲಿ [ಸಮಾಜ ಕಲ್ಯಾಣದ ನಿರ್ದೇಶಕರು,] ಬುಡಕಟ್ಟು ಕಲ್ಯಾಣ ನಿರ್ದೇಶಕರು ಅಥವಾ ಅವರಿಂದ ಪ್ರಾಧಿಕೃತನಾದ ಅಧಿಕಾರಿ ಮತ್ತು ಹಿಂದುಳಿದ ವರ್ಗಗಳ ಸಂಬಂಧದಲ್ಲಿ ಹಿಂದುಳಿದ ವರ್ಗಗಳ ನಿರ್ದೇಶಕರು ಅಥವಾ ಅವರಿಂದ ಪ್ರಾಧಿಕೃತನಾದ ಅಧಿಕಾರಿ (ಇಲ್ಲಿ ಇನ್ನು ಮುಂದೆ ಪ್ರಾಧಿಕೃತ ಅಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಇವರು ಪ್ರಾಧಿಕಾರಿಗಳಾಗಿರುತ್ತಾರೆ.

(2) ಪ್ರಾಧಿಕೃತ ಅಧಿಕಾರಿಯು, ಪ್ರವೇಶಗಳು ಅಥವಾ ನೇಮಕಾತಿಗಳ ವಿಷಯದಲ್ಲಿ ಅಧಿನಿಯಮ, ನಿಯಮಗಳ ಅಥವಾ ರಾಜ್ಯದ ಮೀಸಲಾತಿ ನೀತಿಯ ಯಾವುದೇ ಉಪಬಂಧಗಳ ಉಲ್ಲಂಘನೆಯಾಗಿದೆಯೆಂದು ನಂಬಲು ಕಾರಣಗಳಿದ್ದರೆ ಅವನು, ಪ್ರವೇಶ ನೀಡುವ, ಪ್ರಾಧಿಕಾರಿಗೆ ಅಥವಾ ನೇಮಕಾತಿ ಪ್ರಾಧಿಕಾರಿಗೆ ಅಂಥ ಉಲ್ಲಂಘನೆಯನ್ನು ಸರಿಪಡಿಸಲು ಮೂವತ್ತು ದಿನಗಳ ಅವಧಿಯನ್ನು ನೀಡಿ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

---

1 ನಿಯಮಗಳು 7-ಎ ಮತ್ತು 7-ಬಿ ಗಳನ್ನು ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 08-02-2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 08.02.2000 ರಿಂದ ಜಾರಿಗೆ ಬಂದಿರುತ್ತದೆ.

2 ನಿಯಮ 8 ನ್ನು ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 15-02-2002 ರನ್ವಯ ಬಿಟ್ಟುಬಿಡಲಾಗಿದೆ ಮತ್ತು ದಿನಾಂಕ : 15.02.2002 ರಿಂದ ಜಾರಿಗೆ ಬಂದಿರುತ್ತದೆ.

3 ನಿಯಮ 9-ಎ ನ್ನು ಅಧಿಸೂಚನೆ ಸಂಖ್ಯೆ : ಜಿಎಸ್‌ಆರ್ 177 ರ ಮೂಲಕ ದಿ : 08.09.95 ರನ್ವಯ ಸೇರಿಸಿ ಮತ್ತು ಅಧಿಸೂಚನೆ ಸಂಖ್ಯೆ :ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರನ್ವಯ ಬಿಟ್ಟುಬಿಡಲಾಗಿದೆ ಮತ್ತು ದಿನಾಂಕ : 08.02.2000 ರಿಂದ ಜಾರಿಗೆ ಬಂದಿರುತ್ತದೆ.

4 ನಿಯಮ 10 ಅನ್ನು ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 08-02-2000 ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ : 08.02.2000 ರಿಂದ ಜಾರಿಗೆ ಬಂದಿರುತ್ತದೆ.

(3) ಪ್ರವೇಶ ನೀಡುವ ಪ್ರಾಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರಿಯು ಉಲ್ಲಂಘನೆಯನ್ನು ಸರಿಪಡಿಸುವಲ್ಲಿ ಅಥವಾ ಮನವರಿಕೆಯಾಗುವಂತೆ ಸಮರ್ಥನೆ ನೀಡಲು ವಿಫಲನಾದಲ್ಲಿ, ಪ್ರಾಧಿಕೃತ ಅಧಿಕಾರಿಯು, ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ನೇಮಕಾತಿ ಅಥವಾ ಪ್ರವೇಶವು ಶೂನ್ಯವೆಂದು ಘೋಷಿಸತಕ್ಕದ್ದು;

ಪರಂತು, ಅಂಥ ಘೋಷಣೆಯನ್ನು ಮಾಡುವ ಮೊದಲು, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(4) ಪ್ರವೇಶ ನೀಡುವ ಪ್ರಾಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರಿಯು, ತೃಪ್ತಿಕರ ಸಮರ್ಥನೆ ನೀಡುವಲ್ಲಿ ವಿಫಲನಾದಾಗ, ಪ್ರಾಧಿಕೃತ ಅಧಿಕಾರಿಯು, ಅಂಥ ಪ್ರವೇಶ ನೀಡುವ ಪ್ರಾಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರಿಯನ್ನು ಕಾನೂನು ಕ್ರಮಕ್ಕೆ (ಪ್ರಾಸಿಕ್ಯೂಷನ್‌ಗೆ) ಗುರಿಪಡಿಸಲು ಕ್ರಮ ಕೈಗೊಳ್ಳತಕ್ಕದ್ದು.]

**11. ರಿಕ್ತಸ್ಥಾನ/ ಪ್ರವೇಶ ದಾಖಲಾತಿ ವಹಿ:-** (1)ನಿಯಮ 3 ರ ಮತ್ತು ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಮಾಡಲಾದ ಕಾಲಕಾಲಕ್ಕೆ ಇಂತಹ ಇತರೆ ಕಾರ್ಯನಿರ್ವಾಹಕ ಆದೇಶಗಳಿಗೊಳಪಟ್ಟು;-

(i) ರಾಜ್ಯದ ಯಾವುದೇ ನಾಗರಿಕ ಸೇವಾ ಅಥವಾ ಹುದ್ದೆ ಇಲ್ಲದೆ ಸರ್ಕಾರಿ ವಲಯದ ಸಂಸ್ಥೆಗಳ ಕಾರ್ಯಸಂಸ್ಥೆಯ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳು ನಮೂನೆ-2 ರಲ್ಲಿನಂತೆ ರಿಕ್ತಸ್ಥಾನದ ವಹಿಯನ್ನು ನಿರ್ವಹಿಸತಕ್ಕದ್ದು;

(ii) ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ನಮೂನೆ-3 ರಲ್ಲಿನಂತೆ ಪ್ರವೇಶ ದಾಖಲಾತಿ ವಹಿಯನ್ನು ನಿರ್ವಹಿಸತಕ್ಕದ್ದು;

[1][(iii) ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಕೂಡ ವಿವಿಧ ಪ್ರವರ್ಗಗಳ ಅರ್ಜಿದಾರರಿಂದ ಸ್ವೀಕರಿಸಿದ ಅರ್ಜಿಗಳ ಸ್ವೀಕೃತಿಯನ್ನು ತೋರಿಸಲು ನಮೂನೆ 3-ಎಯಲ್ಲಿರುವಂತೆ ಒಂದು ವಹಿಯನ್ನು ನಿರ್ವಹಿಸತಕ್ಕದ್ದು.]

[2][**12. ತಪಾಸಣೆಗಳು-** (1) ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳ ಸಂಬಂಧದಲ್ಲಿ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿ/ ಸಮಾಜ ಕಲ್ಯಾಣ ನಿರೀಕ್ಷಕನು ಮತ್ತು ಇತರ ಹಿಂದುಳಿದ ವರ್ಗಗಳ ಸಂಬಂಧದಲ್ಲಿ ಹಿಂದುಳಿದ ವರ್ಗಗಳ ನಿರೀಕ್ಷಣಾ ಸಹಾಯಕನು ಮತ್ತು ಆತನಿಗಿಂತ ಹಿರಿಯನಾದ ಇತರ ಅಧಿಕಾರಿಯು (ಇಲ್ಲಿ ಇನ್ನು ಮುಂದೆ ತನಿಖಾಧಿಕಾರಿಯೆಂದು ಉಲ್ಲೇಖಿಸಲಾಗಿದೆ). ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಮಾಡಿದ ಪ್ರವೇಶಗಳ ಅಥವಾ ನೇಮಕಾತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತಪಾಸಣೆ ಮಾಡಬಹುದು.

(2) ತಪಾಸಣಾಧಿಕಾರಿಯು, ಪ್ರವೇಶಗಳಿಗೆ ಅಥವಾ ನೇಮಕಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ತನ್ನ ಮುಂದೆ ಮಂಡಿಸುವಂತೆ ಕೋರಿದಾಗ ಅವುಗಳನ್ನು ಮಂಡಿಸುವುದು ಪ್ರವೇಶ ನೀಡುವ ಅಥವಾ ನೇಮಕ ಮಾಡುವ ಪ್ರಾಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.]

[3][**13. ವಾರ್ಷಿಕ ವರದಿ-(1)** ಎಲ್ಲ ನೇಮಕಾತಿ ಪ್ರಾಧಿಕಾರಿಗಳು ಮತ್ತು ಸಾರ್ವಜನಿಕ ವಲಯದ ಎಲ್ಲಾ ಕಾರ್ಯಸಂಸ್ಥೆಗಳು, ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ

---

1. ಉಪ-ನಿಯಮ 1-(iii) ನ್ನು ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 08-02-2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 08.02.2000 ದಿಂದ ಜಾರಿಗೆ ಬಂದಿರುತ್ತದೆ.
2. ನಿಯಮ 12ನ್ನು ಅಧಿಸೂಚನೆ ಸಂಖ್ಯೆ : : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 08-02-2000 ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ : 08.02.2000 ದಿಂದ ಜಾರಿಗೆ ಬಂದಿರುತ್ತದೆ.
3. ನಿಯಮ 13ನ್ನು ಅಧಿಸೂಚನೆ ಸಂಖ್ಯೆ : : ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 08-02-2000 ರನ್ವಯ ಪ್ರತಿಯೋಜಿಸಲಾಗಿದೆ. ಮತ್ತು ದಿನಾಂಕ : 08.02.2000 ದಿಂದ ಜಾರಿಗೆ ಬಂದಿರುತ್ತದೆ.

ವಾರ್ಷಿಕ ವರದಿಯನ್ನು ನಮೂನೆ-4 ರಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನಮೂನೆ - 5 ರಲ್ಲಿ ಪ್ರತಿ ವರ್ಷದ ಮೇ ತಿಂಗಳ ಒಂದನೇ ದಿನಾಂಕದೊಳಗೆ ಮತ್ತು ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ವಾರ್ಷಿಕ ವರದಿಯನ್ನು ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ನಮೂನೆ -6 ರಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನಮೂನೆ -7 ರಲ್ಲಿ ಪ್ರತಿ ವರ್ಷದ ಸೆಪ್ಟೆಂಬರ್ ಒಂದನೇ ದಿನಾಂಕದೊಳಗಾಗಿ, ಈ ನಿಯಮಗಳಿಗೆ ಅನುಬಂಧಿಸಲಾದ ಅನುಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.]

------

**[1][ನಮೂನೆ -ಎ**

**[ನಿಯಮ 3-ಎ(1)ನ್ನು ನೋಡಿ]**

**ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂಬಂಧದಲ್ಲಿ ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ**

1. ಅರ್ಜಿದಾರನ ಹೆಸರು
2. ತಂದೆ/ತಾಯಿ/ಪೋಷಕರ
   (ತಂದೆತಾಯಿಗಳು ಜೀವಂತವಿರದಿದ್ದರೆ) ಹೆಸರು
   ಪೋಷಕರ ಸಂದರ್ಭದಲ್ಲಿ ಅರ್ಜಿದಾರನೊಡನೆ ಅವರ ಸಂಬಂಧ
3. (ಎ) ಅರ್ಜಿದಾರನ ಹುಟ್ಟಿದ ದಿನಾಂಕ
   (ಬಿ) ತಂದೆ/ತಾಯಿಯವರು ಹುಟ್ಟಿದ ಸ್ಥಳ
4. ಖಾಯಂ ವಿಳಾಸ
5. ಅಂಚೆ ವಿಳಾಸ
6. ಅರ್ಜಿದಾರನ/ತಂದೆತಾಯಿಯವರ ಅಥವಾ
   ಪೋಷಕರ ಸಮುದಾಯ/ಜಾತಿ/ಬುಡಕಟ್ಟು

**ಪ್ರಮಾಣದ ಮೇಲೆ ಘೋಷಣೆ**

_________ ಎಂಬಲ್ಲಿ ವಾಸವಾಗಿರುವ (ಪೂರ್ಣ ವಿಳಾಸ) ---------ಎಂಬುವರ ಮಗ/ಮಗಳಾದ ___________ ಎಂಬ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಪ್ರಮಾಣದ ಮೇಲೆ ಈ ಮುಂದಿನಂತೆ ಹೇಳಿಕೆ ನೀಡುತ್ತೇನೆ, ಎಂದರೆ :-

ಅಭ್ಯರ್ಥಿಯಾದ ಶ್ರೀ/ಶ್ರೀಮತಿ_____________ಇವರು ನನ್ನ ಮಗ/ಮಗಳು/ ಅವಲಂಬಿತ/ಪ್ರತಿಪಾಲಿತ ಆಗಿರುವವರು. ನಾನು ಮತ್ತು ಅಭ್ಯರ್ಥಿಯು, ಅನುಸೂಚಿತ ಜಾತಿ/ ಬುಡಕಟ್ಟು ಎಂದು ಮಾನ್ಯತೆ ಪಡೆದ ಜಾತಿ/ ಬುಡಕಟ್ಟಿಗೆ ಸೇರಿರುತ್ತೇವೆ.

ಈ ಘೋಷಣೆಯು ತಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವಾಗಿದೆ. ಆದಾಗ್ಯೂ, ಅದು ಸತ್ಯವಲ್ಲವೆಂದು ರುಜುವಾತಾದರೆ, ಭಾರತೀಯ ದಂಡ ಸಂಹಿತೆಯ ಪ್ರಕರಣ 171[*] ಮತ್ತು 181[**] ರ ಅಡಿಯಲ್ಲಿ ನಾನು ಸ್ವತ: ಕ್ರಿಮಿನಲ್ ಕಾನೂನು ವ್ಯವಹಾರಣೆಗಳಿಗೆ ಗುರಿಯಾಗಲು ಮತ್ತು ಈ ಪ್ರಮಾಣ ಪತ್ರಕ್ಕನುಸಾರವಾಗಿ ನನ್ನ ಮಗ/ ಮಗಳು/ಅವಲಂಬಿತ/ ಪ್ರತಿಪಾಲಿತ ಇವರಿಗೆ ನೀಡಿದ ಪ್ರಯೋಜನ ಅಥವಾ ರಿಯಾಯಿತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬದ್ಧನಾಗಿರುತ್ತೇನೆ.

ಅಭ್ಯರ್ಥಿಯ ಸಹಿ — ತಂದೆ ತಾಯಿ/ ಪೋಷಕರ

(ತಂದೆ ತಾಯಿಗಳು ಜೀವಂತವಿರದಿದ್ದರೆ)

ಸಹಿ — ಸ್ಥಳ :

ದಿನಾಂಕ: — ದಿನಾಂಕ :

---

1 ನಮೂನೆ ಎ,ಬಿ,ಸಿ,ಡಿ,ಇ ಮತ್ತು ಎಫ್ ಗಳನ್ನು ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿ : 08-02-2000 ರನ್ವಯ ಸೇರಿಸಲಾಗಿದೆ ಮತ್ತು ದಿನಾಂಕ : 08-02-2000 ರಿಂದ ಜಾರಿಗೆ ಬಂದಿರುತ್ತದೆ.

* ಯಾವುದೇ ಸರ್ಕಾರಿ ನೌಕರನಿಗೆ ಸತ್ಯವಲ್ಲದ ಮಾಹಿತಿ ನೀಡಿದ್ದಕ್ಕಾಗಿ ಭಾರತ ದಂಡ ಸಂಹಿತೆ ಪ್ರಕರಣ 171 ರ ಅಡಿಯಲ್ಲಿ ಆರು ತಿಂಗಳುಗಳ ಅವಧಿಗೆ ವಿಸ್ತರಿಸಬಹುದಾದ ಸಾಮಾನ್ಯ ಕಾರಾಗೃಹವಾಸಕ್ಕೆ ಅಥವಾ 1,000/- ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡಕ್ಕೂ ಗುರಿಯಾಗುತ್ತಾರೆ.

** ಸಾರ್ವಜನಿಕ ನೌಕರನಿಗೆ ಪ್ರಮಾಣ ವಚನ ಬೋಧಿಸಲು ಅಥವಾ ದೃಢೀಕರಿಸಲು ಪ್ರಾಧಿಕೃತರಾದ ವ್ಯಕ್ತಿಗಳಿಗೆ ಪ್ರಮಾಣದ ಅಥವಾ ದೃಢೀಕರಣದ ಮೇಲೆ ನೀಡಿದ ಸುಳ್ಳು ಹೇಳಿಕೆ ನೀಡುವುದು ಭಾರತ ದಂಡ ಸಂಹಿತೆಯ ಪ್ರಕರಣ 181 ರ ಅಡಿಯಲ್ಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆಗೆ ಮತ್ತು ಜುಲ್ಮಾನೆ ವಿಧಿಸುವುದಕ್ಕೆ ಗುರಿಪಡಿಸುತ್ತದೆ.

**ಸೂಚನೆ :** ಅಭ್ಯರ್ಥಿಗಳು ತಮ್ಮ ಅರ್ಜಿಗಳೊಡನೆ ಘೋಷಣೆಗಳನ್ನು ಮಾತ್ರ ಸಲ್ಲಿಸಬೇಕು. ಸಿಂಧುತ್ವ ಪ್ರಮಾಣ ಪತ್ರವನ್ನು ಸಂಸ್ಥೆಯ ಮುಖ್ಯಸ್ಥರಿಂದ/ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆಯತಕ್ಕದ್ದು.

-------

**ನಮೂನೆ -ಬಿ**

**(ನಿಯಮ 3-ಎ(1)ನ್ನು ನೋಡಿ)**

ಹಿಂದುಳಿದ ವರ್ಗಗಳ ಪ್ರವರ್ಗ -Iರ ಸಂಬಂಧದಲ್ಲಿ _____ ಜಾತಿ ಪ್ರಮಾಣಪತ್ರಕ್ಕಾಗಿ ಅರ್ಜಿ.

ಇವರಿಗೆ,

ತಹಶೀಲ್ದಾರರು
-----------ತಾಲ್ಲೂಕು
-----------ಜಿಲ್ಲೆ

ಮಾನ್ಯರೇ,

ಶ್ರೀ/ ಶ್ರೀಮತಿ ____ಇವರ ಮಗ/ಮಗಳು/ಪತ್ನಿ/ಪತಿ________ ಎಂಬ ನಾನು, ಮೀಸಲಾತಿಯನ್ನು ಕ್ಲೇಮು ಮಾಡುವುದಕ್ಕಾಗಿ ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ಈ ಮುಂದಿನಂತೆ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.-

| | | | |
|---|---|---|---|
| 1. | ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ | | |
| 2. | ಅಭ್ಯರ್ಥಿಯ ಸ್ವಂತ ಸ್ಥಳ | ಗ್ರಾಮ<br>ತಾಲ್ಲೂಕು<br>ಜಿಲ್ಲೆ | |
| 3. | ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ | | |
| 4. | ತಂದೆಯ /ತಾಯಿಯ/ಪೋಷಕರ/ಪತಿಯ /ಪತ್ನಿಯ ಹೆಸರು ಮತ್ತು ಉದ್ಯೋಗ | | |
| 5. | ಅಭ್ಯರ್ಥಿಯ ಈಗಿನ ವಿಳಾಸ | | |
| 6. | ಅಭ್ಯರ್ಥಿಯ ಖಾಯಂ ವಿಳಾಸ | | |
| 7. | ಅಭ್ಯರ್ಥಿಯ ಜಾತಿ / ಉಪ ಜಾತಿ ಮತ್ತು ಪ್ರವರ್ಗ (ದಾಖಲೆಗಳನ್ನು ಒದಗಿಸಬೇಕು) | | |
| 8. | ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ವಿವರ | ವರ್ಷ ಮತ್ತು ತರಗತಿ | ಶಾಲೆಯ ಹೆಸರು ಮತ್ತು ಸ್ಥಳ |

**ಪ್ರಮಾಣ ಮಾಡಿ ನೀಡಿದ ಘೋಷಣೆ**

ಮೇಲೆ ಒದಗಿಸಿದ ಮಾಹಿತಿ/ ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

(ಅಭ್ಯರ್ಥಿಯ ಸಹಿ)

ಸ್ಥಳ :
ದಿನಾಂಕ :

ಮೇಲೆ ಒದಗಿಸಿದ ವಿವರಣೆಗಳು ಸತ್ಯವಾಗಿವೆ ಮತ್ತು ಅವು ಸತ್ಯವಲ್ಲ ಎಂದು ಕಂಡು ಬಂದಲ್ಲಿ, ನಾನು ಕ್ರಿಮಿನಲ್ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ ಪೋಷಕರ ಸಹಿ
(ತಂದೆ /ತಾಯಿಗಳು ಜೀವಂತವಿರದಿದ್ದರೆ)

ಸ್ಥಳೀಯ ಇಬ್ಬರು ಸಾಕ್ಷಿದಾರರು:

(1)
(2)

**ನಮೂನೆ –ಸಿ**
**(ನಿಯಮ 3-ಎ(1)ನ್ನು ನೋಡಿ)**
**ಆದಾಯ ಮತ್ತು ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ**

ಇವರಿಗೆ ,
ತಹಶೀಲ್ದಾರರು
_____________ತಾಲ್ಲೂಕು
______________ಜಿಲ್ಲೆ

ಮಾನ್ಯರೇ,

ಶ್ರೀ/ ಶ್ರೀಮತಿ ___________ಇವರ ಮಗ/ಮಗಳು/ಪತ್ನಿ/ಪತಿ _________ ಎಂಬ ನಾನು, ಮೀಸಲಾತಿಯನ್ನು ಕ್ಲೇಮು ಮಾಡಲು ಆದಾಯ ಮತು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ಈ ಮುಂದಿನಂತೆ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.

| | | | |
|---|---|---|---|
| 1. | ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ | | |
| 2. | ಅಭ್ಯರ್ಥಿಯ ಸ್ವಂತ ಸ್ಥಳ | ಗ್ರಾಮ :<br>ತಾಲ್ಲೂಕು:<br>ಜಿಲ್ಲೆ: | |
| 3. | ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ | | |
| 4. | ತಂದೆಯ/ತಾಯಿಯ/ಪೋಷಕರ/ಪತಿಯ/ಪತ್ನಿಯ ಹೆಸರು ಮತ್ತು ಉದ್ಯೋಗ (ಉಧ್ಯೋಗವು ಸರ್ಕಾರಿ / ಅರೆ ಸರ್ಕಾರಿಸಾರ್ವಜನಿಕ ಉಧ್ಯಮ / ಖಾಸಗಿ) | | |

| | | | |
|---|---|---|---|
| ೫. | ಅಭ್ಯರ್ಥಿಯ ಈಗಿನ ವಿಳಾಸ | | |
| ೬. | ಅಭ್ಯರ್ಥಿಯ ಖಾಯಂ ವಿಳಾಸ | | |
| ೭. | ಅಭ್ಯರ್ಥಿಯ ಜಾತಿ / ಉಪ ಜಾತಿ ಮತ್ತು ಪ್ರವರ್ಗ (ದಾಖಲೆಗಳನ್ನು ಒದಗಿಸಬೇಕು) | | |
| ೮. | ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ವಿವರ | ವರ್ಷ ಮತ್ತು ತರಗತಿ | ಶಾಲೆಯ ಹೆಸರು ಮತ್ತು ಸ್ಥಳ |
| ೯. | ಅಭ್ಯರ್ಥಿಯ, ಅಭ್ಯರ್ಥಿಯ ತಂದೆ/ ತಾಯಿ/ ಪೋಷಕರ (ತಂದೆ/ತಾಯಿ ಜೀವಂತವಿಲ್ಲದಿದ್ದರೆ) ವಾರ್ಷಿಕ ಆದಾಯ(ಸರ್ಕಾರಿ/ಅರೆ ಸರ್ಕಾರಿ /ಸಾರ್ವಜನಿಕ ಉದ್ಯಮ /ಖಾಸಗಿ ಸೇವೆಯಲ್ಲಿದ್ದರೆ)<br>1) ವೇತನ ಶ್ರೇಣಿ<br>2) ಜಮೀನಿನ ವಿವರ<br>3) ಇತರ ಮೂಲಗಳು | | |
| ೧೦. | ಮೇಲು ಸ್ಥರದ (ಕ್ರೀಮಿಲೇಯರ್) ಸೂತ್ರಗಳನ್ನು ಅನ್ವಯಿಸಿದ ನಂತರ ಅಭ್ಯರ್ಥಿಯು/ತಂದೆ/ ತಾಯಿ/ಪತ್ನಿ/ಪತಿಯು ಇದಕ್ಕೆ ಅರ್ಹನಾಗಿದ್ದಾನೆಯೇ? | | |

**ಪ್ರಮಾಣ ಮಾಡಿ ಹೇಳಿದ ಘೋಷಣೆ**

ಮೇಲೆ ಒದಗಿಸಿದ ಮಾಹಿತಿಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕ ಪ್ರಮಾಣ ಮಾಡುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

(ಅಭ್ಯರ್ಥಿಯ ಸಹಿ)

ಸ್ಥಳ :
ದಿನಾಂಕ :

ಮೇಲೆ ಒದಗಿಸಿದ ವಿವರಣೆಗಳು ಸತ್ಯವಾಗಿವೆ ಮತ್ತು ಒಂದು ವೇಳೆ ಅವು ಸತ್ಯವಲ್ಲ ಎಂದು ಕಂಡು ಬಂದಲ್ಲಿ, ನಾನು ಕ್ರಿಮಿನಲ್ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ ಪೋಷಕರ ಸಹಿ
(ತಂದೆ /ತಾಯಿಗಳು ಜೀವಂತವಿರದಿದ್ದರೆ)

**ಸ್ಥಳೀಯ ಇಬ್ಬರು ಸಾಕ್ಷಿದಾರರು** :
ನಾವು ಅಭ್ಯರ್ಥಿಯನ್ನು/ತಂದೆ/ತಾಯಿ/ಪತ್ನಿ/ಪತಿಯನ್ನು ಅವರ ಸಹಿಗಳನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ: (1)

(ಪೂರ್ಣ ವಿಳಾಸದೊಂದಿಗೆ) (2)
ಸ್ಥಳ:

-------

**ನಮೂನೆ-ಡಿ**

**[ನಿಯಮ 3-ಎ(2) (3) ನೋಡಿ]**

**ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

## ಪ್ರಮಾಣ ಪತ್ರ

______________ರಾಜ್ಯದ/ಕೇಂದ್ರಾಡಳಿತ ಪ್ರದೇಶದ *______________ಜಿಲ್ಲೆಯ /ವಿಭಾಗದ ______________ಗ್ರಾಮ /ಪಟ್ಟಣದ * ನಿವಾಸಿಯಾದ ಶ್ರೀ/ ಶ್ರೀಮತಿ _________________ಎಂಬುವವರ ಮಗ/ಮಗಳಾದ ಶ್ರೀ/ಶ್ರೀಮತಿ ______________ ಇವರು ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟು* ಎಂದು ಮಾನ್ಯ ಮಾಡಲಾಗಿರುವ ಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

* ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951.

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971 ರ ಮೂಲಕ ತಿದ್ದುಪಡಿಯಾದಂತೆ).

* ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ) ಅನುಸೂಚಿತ ಜಾತಿಗಳ ಆದೇಶ, 1956.
* ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976 ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
* ಸಂವಿಧಾನ (ದಾದರ್ ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962.
* ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964.
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) ( ಉತ್ತರ ಪ್ರದೇಶ) ಆದೇಶ, 1967.
* ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ ಬುಡಕಟ್ಟುಗಳ ಆದೇಶ, 1988.
* ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ.

2. ಶ್ರೀ/ ಶ್ರೀಮತಿ/ ಕುಮಾರಿ*----------------ಮತ್ತು /ಅಥವಾ ಅವನ * / ಅವಳ* ಕುಟುಂಬವು ----------------ರಾಜ್ಯ / ಕೇಂದ್ರಾಡಳಿತ ಪ್ರದೇಶದ --------------ಜಿಲ್ಲಾ /ವಿಭಾಗದ* -----------ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ (ಗಳು).

ಸಹಿ________________

ತಹಶೀಲ್ದಾರ್ __________

ಸ್ಥಳ :

ದಿನಾಂಕ :

ಪದನಾಮ

(ಕಛೇರಿ ಮೊಹರಿನೊಂದಿಗೆ)

**ರಾಜ್ಯ**
**ಕೇಂದ್ರಾಡಳಿತ ಪ್ರದೇಶ***
***ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟುಬಿಡಿ/ಹೊಡೆದು ಹಾಕಿ.**

**ಸೂಚನೆ:**ಇಲ್ಲಿ ಉಪಯೋಗಿಸಿದ 'ಸಾಮಾನ್ಯ ನಿವಾಸಿಗಳು" ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950 ರ 20 ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ : ಬಿಸಿ 12028/2/76-ಎಸ್‌ಟಿಸಿ-1 ಗೃಹ ಮಂತ್ರಾಲಯದ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ 13-2-74-ಇಎಸ್‌ಟಿ- (ಎಸ್‌ಸಿಟಿ) ದಿನಾಂಕ 5 ನೇ ಆಗಸ್ಟ್ 1975 ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ, ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ, ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

----

**ನಮೂನೆ –ಇ**
**[ನಿಯಮ 3-ಎ(2) (3) ನೋಡಿ]**
**ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣ ಪತ್ರ**

------ ಗ್ರಾಮ/ಪಟ್ಟಣ/ನಗರದ ನಿವಾಸಿಯಾದ ಶ್ರೀ/ಶ್ರೀಮತಿ___________ಇವರ

ಮಗ/ಮಗಳು/ಪತ್ನಿ/ಪತಿಯಾದ ಶ್ರೀ/ಶ್ರೀಮತಿ________ ಇವರು ಹಿಂದುಳಿದ ವರ್ಗಗಳ (ಪ್ರವರ್ಗ)

__________ ಜಾತಿಯ _____ ಉಪ-ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ :
ದಿನಾಂಕ :

ತಹಶೀಲ್ದಾರ್
-----------ತಾಲ್ಲೂಕು
(ಕಛೇರಿ ಮೊಹರು)

-----------

**ನಮೂನೆ –ಎಫ್**
**(ನಿಯಮ 3-ಎ(2) (3) ನೋಡಿ)**

**ಪ್ರವರ್ಗ –I ರ ಹೊರತಾಗಿ, ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ**

_____ರಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ______ಇವರ ಮಗ/ಮಗಳು/ ಪತ್ನಿಯಾದ, ಶ್ರೀ/ ಶ್ರೀಮತಿ/ಕುಮಾರಿ__________________ ಇವರು ಮತ್ತು ಆತನ /ಅವಳ ತಂದೆ ತಾಯಿ /ಪೋಷಕರು/ಪತ್ನಿ/ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ: ಎಸ್‌ಡಬ್ಲ್ಯೂಡಿ 150 ಬಿಸಿಎ 94 ದಿನಾಂಕ : 17.9.1994 ಮತ್ತು ಎಸ್‌ಡಬ್ಲ್ಯೂಡಿ 251 ಬಿಸಿಎ 94 ದಿನಾಂಕ : 31.1.1995 ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ಥರದ (ಕ್ರೀಮಿಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ/ ಪತ್ನಿ/ ಪತಿಯಾಗಲಿ ಸರ್ಕಾರದ ಸೇವೆಯಲ್ಲಿ Iನೇ ದರ್ಜೆಯ ಅಥವಾ IIನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು;ಅಥವಾ ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ ; ಅಥವಾ

ಖಾಸಗಿ ನಿಯೋಜಕರ ಕೈ ಕಳಗೆ, IIನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000-11,200/- ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

**ಅಥವಾ**

ಆತನ/ ಆಕೆಯ ತಂದೆ ತಾಯಿ/ ಪೋಷಕ/ಪತ್ನಿ/ಪತಿಯ ಆದಾಯ ತೆರೆಗೆದಾರನಲ್ಲ ಅಥವಾ ಸಂಪತ್ತು ತೆರಿಗೆದಾರನಲ್ಲವೆಂದು:

**ಅಥವಾ**

ಆತನ/ ತಂದೆ /ತಾಯಿ / ಪೋಷಕ/ಪತ್ನಿ/ಪತಿಯ ಮಾರಾಟ/ ತೆರಿಗೆದಾರನಲ್ಲ ಅಥವಾ ಆತನ/ಆಕೆಯ ತಂದೆ ತಾಯಿ/ ಪೋಷಕ/ಪತ್ನಿ /ಪತಿಯು ಅಥವಾ ಇವರಿಬ್ಬರೂ 8 ಹೆಕ್ಟೇರಿಗಿಂತ ಹೆಚ್ಚಿನ ಮಳೆ ಅಧಾರಿತ ಅಥವಾ ಒಣಭೂಮಿ ಅಥವಾ ಅದಕ್ಕೆ ಸಮಾನವಾದ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಶ್ರೀ/ ಶ್ರೀಮತಿ/ಕುಮಾರಿ______ಇವರು ಹಿಂದುಳಿದ ವರ್ಗಗಳ___________ ಪ್ರವರ್ಗಕ್ಕೆ ಸೇರಿರುತ್ತಾರೆ.

ತಹಶೀಲ್ದಾರ್

ಸ್ಥಳ : ------------ತಾಲ್ಲೂಕು

ದಿನಾಂಕ :

ಕಛೇರಿ ಮೊಹರು

----------

**ನಮೂನೆ-1**

**(ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಅರ್ಜಿ)**

| | | | |
|---|---|---|---|
| 1. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ<br>(ಎ) ಈಗಿನ ವಿಳಾಸ<br>(ಬಿ) ಖಾಯಂ ವಿಳಾಸ | | |
| 2 | ತಂದೆ/ತಾಯಿ/ಪೋಷಕರು/ಗಂಡನ ಹೆಸರು | | |
| 3 | ಹುಟ್ಟಿದ ದಿನಾಂಕ : | | |
| 4 | ಕುಟುಂಬದ ವಾರ್ಷಿಕ ಆದಾಯ ಮತ್ತು ಆದಾಯದ ಮೂಲಗಳು:<br>(ಎ) ಕೃಷಿ<br>(ಬಿ) ವ್ಯಾಪಾರ<br>(ಸಿ) ಸೇವೆ | | ಒಟ್ಟು ರೂ. |
| 5 | ಆಸ್ತಿಯ ವಿವರಗಳು : | | |
| 6 | ಶಾಲೆಯ ದಾಖಲಾತಿಗಳಲ್ಲಿ ತಿಳಿಸಿರುವಂತೆ ಜಾತಿ :<br>(ಎ) ಪ್ರಾಥಮಿಕ ಶಾಲೆ<br>(ಬಿ) ಮಾಧ್ಯಮಿಕ ಶಾಲೆ<br>(ಸಿ) ಪ್ರೌಢಶಾಲೆ<br>(ಡಿ) ಕಾಲೇಜು/ ವಿಶ್ವವಿದ್ಯಾನಿಲಯ | | |
| 7 | ವಿದ್ಯಾರ್ಹತೆಗಳು:<br>(ಎ) ಸಾಮಾನ್ಯ ವಿದ್ಯಾರ್ಹತೆ<br>(ಬಿ) ತಾಂತ್ರಿಕ ವಿದ್ಯಾರ್ಹತೆ | | |
| 8 | ಶಾಲಾ /ಕಾಲೇಜುಗಳಲ್ಲಿ ವಿದ್ಯಾಭ್ಯಾಸದ ವಿವರಗಳು<br>(ಎ) ಪ್ರಾಥಮಿಕ ಶಾಲೆ<br>(ಬಿ) ಮಾಧ್ಯಮಿಕ ಶಾಲೆ<br>(ಸಿ) ಪ್ರೌಢಶಾಲೆ<br>(ಡಿ) ಕಾಲೇಜು | ವಿದ್ಯಾಸಂಸ್ಥೆಯ ಹೆಸರು | ವಿದ್ಯಾಭ್ಯಾಸದ ವರ್ಷ |

| | |
|---|---|
| 9 | ಅಭ್ಯರ್ಥಿಯು ಈಗಾಗಲೇ ಪರಿಶೀಲನಾ ಪತ್ರ ಪಡೆದಿರುವನೇ? |
| 10 | (ಹಾಗಾಗಿದ್ದಲ್ಲಿ ಅದರ ಸಂಖ್ಯೆ ಮತ್ತು ದಿನಾಂಕ ನಮೂದಿಸುವುದು) |
| 11 | ಅಭ್ಯರ್ಥಿಯು ತಿಳಿಸಲು ಬಯಸುವ ಇತರ ವಿಷಯಗಳು |

**ಸ್ಥಳ :** ಅಭ್ಯರ್ಥಿಯ ಸಹಿ
**ದಿನಾಂಕ:**

--------

**ಪ್ರಮಾಣ ಪತ್ರ**

ಕರ್ನಾಟಕ ಅನುಸೂಚಿತ ಜಾತಿಗಳು / ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳಲ್ಲಿ ಮೀಸಲಾತಿ ಇತ್ಯಾದಿ) ಅಧಿನಿಯಮ, 1990ರ ಉಪಬಂಧಗಳನ್ನು ತಿಳಿದಿರುತ್ತೇವೆ ಮತ್ತು ಮೇಲೆ ತಿಳಿಸಿದ ವಿಷಯಗಳು ನನಗೆ ತಿಳಿದಿರುವಂತೆ ಸತ್ಯವಾಗಿವೆ ಮೇಲೆ ತಿಳಿಸಿದ ವಿಷಯಗಳು ಸತ್ಯವಲ್ಲವೆಂದು ಸಾಬೀತಾದಲ್ಲಿ ನಾನು ಕ್ರಿಮಿನಲ್ ವಿಚಾರಣೆಗೆ ಒಳಪಡುತ್ತೇವೆಂದು ಘೋಷಿಸುತ್ತೇನೆ.

**ಸ್ಥಳ :** ಅಭ್ಯರ್ಥಿಯ ತಂದೆ /ತಾಯಿ/ಪೋಷಕರ ಸಹಿ ಅಭ್ಯರ್ಥಿಯ ಸಹಿ
**ದಿನಾಂಕ:**

-----

**[1][ನಮೂನೆ -1 -ಎ**

(ಸಿಂಧುತ್ವ ಪ್ರಮಾಣ ಪತ್ರ)

ಸಮಾಜ ಕಲ್ಯಾಣ / ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯಗಳ ಜಾತಿ ಪರಿಶೋಧನಾ ಸಮಿತಿ/ ಜಾತಿ ಮತ್ತು ಆದಾಯ ಪರಿಶೋಧನಾ ಸಮಿತಿ.

ಸಮಿತಿಯ ತೀರ್ಮಾನ ಸಂಖ್ಯೆ ದಿನಾಂಕ:

ಶ್ರೀ/ ಶ್ರೀಮತಿ/ ಕುಮಾರಿ ______________ ದಿನಾಂಕ ______________ರವರ ಅರ್ಜಿಯನ್ನು ದಾಖಲೆಗಳೊಂದಿಗೆ ಸಮಿತಿಯು ಪಡೆದಿದ್ದು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಪಡೆಯುವ ಬಗ್ಗೆ ಎಲ್ಲಾ ಅಂಶಗಳನ್ನು ವಿವರಗಳನ್ನು ಪರಿಶೀಲಿಸಿತು.

ಕರ್ನಾಟಕ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ನೇಮಕಾತಿಗಳ ಮುಂತಾದವುಗಳ ಕುರಿತ 1990 ನೇ ಅಧಿನಿಯಮದಲ್ಲಿ ಉಪಬಂಧಗಳನ್ವಯ ಪ್ರದತ್ತವಾಗಿರುವ ಅಧಿಕಾರವನ್ನುಚಲಾಯಿತಿ ಸಮಿತಿಯು ಸದರಿ ಸೌಲಭ್ಯದ ಬಗ್ಗೆ ಸಮಿತಿ ಮುಂದೆ ಒದಗಿಸಿದ ದಾಖಲಾತಿಗಳನ್ನು ಪರಿಶೋಧಿಸಿ ಮತ್ತು ಸೂಕ್ಷ್ಮವಾಗಿ ಪರಿಶೀಲಿಸಿ ಹಕ್ಕಿನ ಬಗ್ಗೆ ಖಾತ್ರಿಪಡಿಸಿಕೊಂಡಿರುತ್ತದೆ.

ಆದ್ದರಿಂದ, ಶ್ರೀ/ ಶ್ರೀಮತಿ/ಕುಮಾರಿ_______________ ದಿನಾಂಕ ________ ರವರ ಜಾತಿ/ ವರ್ಗಕ್ಕೆ (ಇಲ್ಲಿ ಜಾತಿ ನಮೂದಿಸತಕ್ಕದ್ದು) ಸೇರಿರುವುದು ಸಿಂಧುವಾಗಿದೆ ಎಂದು ಸಮಿತಿಯು ಈ ಮೂಲಕ ಪ್ರಮಾಣೀಕರಿಸುತ್ತದೆ.

_________________________

ಅಧ್ಯಕ್ಷರು,
ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ

______________

**ನಮೂನೆ-2**

| ಹುದ್ದೆಯ ಹೆಸರು ಮತ್ತು ಮಂಜೂರಾದ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ ಸಂಖ್ಯೆ | ನೇಮಕಾತಿ ಪ್ರಾಧಿಕಾರಿಯ ಹೆಸರು | ಈಗಾಗಲೇ ಭರ್ತಿ ಮಾಡಿರುವ ವರ್ಗವಾರು ಹುದ್ದೆಗಳ ವಿವರ | ಭರ್ತಿ ಮಾಡಬೇಕಾಗಿರುವ ಖಾಲಿ ಹುದ್ದೆಗಳು | ನೇಮಕಾತಿ ವಿಧಾನ ನೇರ ನೇಮಕಾತಿ ಮುಂಬಡ್ತಿ ನಿಯೋಜನೆ |
|---|---|---|---|---|---|
| 1 | 2 | 3 | 4 | 5 | 6 |
| | | | | | |

______________________________________________________

1 ನಮೂನೆ 1-ಎ ಅನ್ನು ಜಿಎಸ್‌ಆರ್ 217 ದಿನಾಂಕ : 11.11.1993 ರ ಮೂಲಕ ಪ್ರತಿಯೋಜಿಸಲಾಗಿದೆ ಹಾಗೂ ದಿನಾಂಕ : 11.11.1993 ರಿಂದ ಜಾರಿಗೆ ಬಂದಿರುತ್ತದೆ.

| ರಿಕ್ತ ಸ್ಥಾನದ ಕ್ರಮ ಸಂಖ್ಯೆ | ಹುದ್ದೆ ಖಾಲಿ ಬಿದ್ದ ದಿನಾಂಕ | ನೇಮಕಾತಿ ವಿಧಾನ ನೇರ ನೇಮಕಾತಿ / ನಿಯೋಜನೆ | ನೇರ ನೇಮಕಾತಿಯಲ್ಲಿ ಮೀಸಲಾತಿ/ ಮೀಸಲಾತಿಯಲ್ಲಿಲ್ಲದರಲ್ಲಿ ರಿಕ್ತಸ್ಥಾನಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಎ,ಬಿ,ಸಿ,ಡಿ,ಇ | ಆಯ್ಕೆ ಪ್ರಾಧಿಕಾರಕ್ಕೆ ರಿಕ್ತ ಸ್ಥಾನಗಳನ್ನು ತಿಳಸಿದ ದಿನಾಂಕ | ಖಾಲಿ ಹುದ್ದೆಗಳಿಗೆ ಆಯ್ಕೆ ಮೀಸಲಾತಿ ಮತ್ತು ಮೀಸಲಾತಿ ಅಲ್ಲದ್ದು |
|---|---|---|---|---|---|
| 1 | 2 | 3 | 4 | 5 | 6 |
| | | | | | |

| ನೇಮಕ ಮಾಡಿಕೊಂಡ ದಿನಾಂಕ | ನೇಮಕಾತಿ ಆದೇಶದ ಸಂಖ್ಯೆ ಮತ್ತು ದಿನಾಂಕ | ನೇಮಕಾತಿ ವಿಧಾನ ನೇರ ನೇಮಕಾತಿ/ ನಿಯೋಜನೆ | ಅಭ್ಯರ್ಥಿಯ ಹೆಸರು ಮತ್ತು ನೇಮಕಾತಿ ಆದೇಶದಲ್ಲಿ ಅಭ್ಯರ್ಥಿಯ ಕ್ರಮ ಸಂಖ್ಯೆ | ಹುದ್ದೆಗೆ ನೇಮಕಮಾಡಿ ಕೊಂಡ ಅಭ್ಯರ್ಥಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಎ.ಬಿ.ಸಿ.ಡಿ.ಇ | ಮೀಸಲಾತಿಯಲ್ಲಿ ಯಾವುದೇ ರೀತಿಯ ವಿಚಲನೆಯಾಗಿದ್ದರೆ ಸಕಾರಣಗಳು |
|---|---|---|---|---|---|
| 7 | 8 | 9 | 10 | 11 | 12 |
| | | | | | |

**ಸಹಿ/-**

____________

**ನಮೂನೆ -3**

ವೃತ್ತಿಪರ / ಶೈಕ್ಷಣಿಕ ಅಧ್ಯಯನ ತರಗತಿಗಳಿಗೆ ಪರಿಶಿಷ್ಟ ಜಾತಿಗಳು/ ಪರಿಶಿಷ್ಟ ವರ್ಗಗಳು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶದ ವಿವರಗಳನ್ನು ನಮೂದಿಸುವ ವಹಿ

ವಿದ್ಯಾಸಂಸ್ಥೆಯ ಹೆಸರು ಮತ್ತು ವಿಳಾಸ :

| ಅಧ್ಯಯನ ತರಗತಿಯ ಹೆಸರು ಮತ್ತು ಪ್ರಾರಂಭದ ವರ್ಷ | ಮಂಜೂರಾತಿಯ ಒಟ್ಟು ಸೀಟುಗಳು (ಅಧ್ಯಯನ ತರಗತಿವಾರು) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಎ.ಬಿ.ಸಿ.ಡಿ.ಇ | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಎ.ಬಿ.ಸಿ.ಡಿ.ಇ ವರ್ಗಗಳಿಗೆ ಮೀಸಲಾದ ಬೇಕಾದ ಒಟ್ಟು ಸಂಖ್ಯೆ (ಅಧ್ಯಯನ ತರಗತಿವಾರು) ಪ್ರಚಲಿತ ಸರ್ಕಾರಿ ಆದೇಶದ ಪ್ರಕಾರ | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಎ.ಬಿ.ಸಿ.ಡಿ.ಇ ವರ್ಗಗಳಲ್ಲಿ ಪ್ರವೇಶ ಮಾಡಿಕೊಂಡ ಅಧ್ಯಯನ ತರಗತಿಗಳ ವರ್ಗವಾರು ವಿವರ | ಯಾವುದೇ ರೀತಿಯ ವಿಚಲನೆಯಾಗಿದ್ದಲ್ಲಿ ಕಾರಣಗಳು |
|---|---|---|---|---|
| 1 | 2 | 3 | 4 | 5 |
| | | | | |

**ಸಹಿ /-**

-------

[1][ನಮೂನೆ 3-ಎ

**ವಿವಿಧ ಪ್ರವರ್ಗಗಳ ವಿದ್ಯಾರ್ಥಿಗಳಿಂದ ಪ್ರವೇಶಕ್ಕಾಗಿ ಸ್ವೀಕರಿಸಲಾದ ವರ್ಷವಾರು ಅರ್ಜಿಗಳ ಸ್ವೀಕೃತಿಯನ್ನು ತೋರಿಸುವ ರಿಜಿಸ್ಟರು**

---

**1 ನಮೂನೆ 3-ಎ ಅನ್ನು ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಡಿ 13 ಎಸ್‌ಎಡಿ 97 ರ ಮೂಲಕ ದಿನಾಂಕ : 08.02.2000 ರನ್ವಯ ಸೇರಿಸಲಾಗಿದೆ ಮತ್ತು ಜಾರಿಗೆ ಬಂದಿರುತ್ತದೆ.**

| ಶಿಕ್ಷಣ ಸಂಸ್ಥೆಯ ಹೆಸರು ಮತು ವಿಳಾಸ | ಕೋರ್ಸಿನ ಹೆಸರು ಮತ್ತು ಪ್ರಾರಂಭದ ವರ್ಷ | ಸೀಟುಗಳ ಒಟ್ಟು ಸಂಖ್ಯೆ |
|---|---|---|
| 1 | 2 | 3 |
| | | |

**ಸ್ವೀಕರಿಸಿದ ಅರ್ಜಿಗಳ ಒಟ್ಟು ಸಂಖ್ಯೆ**

| ಅನುಸೂಚಿತ ಜಾತಿ | ಅನುಸೂಚಿತ ಬುಡಕಟ್ಟು | ಪ್ರವರ್ಗ | | | | |
|---|---|---|---|---|---|---|
| | | 1 | 2-ಎ | 2-ಬಿ | 3-ಎ | 3-ಬಿ |
| | | | | | | |

## ನಮೂನೆ -4

### (ಎ) ಪ್ರತಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಪೂರ್ಣ ವಿವರ

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾತಿ ಸಂಖ್ಯೆ | ನೇಮಕಾತಿ ಮಾಡಿದ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳು | ಖಾಲಿ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ ವರ್ಷ/ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

### (ಬಿ) -------ರಿಂದ---------ರವರೆಗೆ ಮಾಡಿಕೊಂಡ ವಿವರಗಳು

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ ಮಾಡಿ ತಿಳಿಸಿದ ಏಜೆನ್ಸಿ/ಉ.ವಿ.ಕ/ಕ/ಲೋ ಸೇಆ ಇತರೆ | ಹುದ್ದೆಗಳು | ಖಾಲಿ ಹುದ್ದೆಯ ವರ್ಗೀಕರಣ | | ಒಟ್ಟು | |
|---|---|---|---|---|---|---|---|
| | | | | ಪ.ಜಾ | ಪ.ವ. | ಪ.ಜಾ | ಪ.ವ. |
| 1 | 2 | 3 | 4 | 5 | 6 | 7 | 8 |
| | | | | | | | |

| ಆಯ್ಕೆ ಮಾಡಿದ ದಿನಾಂಕ | ಆಯ್ಕೆ ಮಾಡಿದ ಅಭ್ಯರ್ಥಿಗಳ ವರ್ಗೀಕರಣ | | ಹಾಲಿ ಸರ್ಕಾರದ ಆದೇಶದ ಪ್ರಕಾರ ನೇಮಕ ಮಾಡಬೇಕಾಗಿರುವುದು | | ಮೀಸಲಾತಿಯಲ್ಲಿ ಕೊರತೆ ಬಿದ್ದಿರುವುದು | | ವಿಚಲನೆಗೆ ಕಾರಣಗಳು |
|---|---|---|---|---|---|---|---|
| | ಪ.ಜಾ | ಪ.ವ. | | | | | |
| 9 | 10 | 11 | 12 | 13 | 14 | 15 | 16 |

ಸಹಿ/-

## ನಮೂನೆ -5

## ವಾರ್ಷಿಕ ವರದಿ

### (ಎ) ಪ್ರತಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಪೂರ್ಣ ವಿವರ

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾತಿ ಸಂಖ್ಯೆ | ನೇಮಕಾತಿ ಮಾಡಿದ ಹಿಂದುಳಿದ ವರ್ಗಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ ವರ್ಷ/ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

(ಬಿ) ----ರಿಂದ -----ರವರೆಗೆ ಮಾಡಲಾದ ನೇಮಕಾತಿ ಮಾಡಿದ ಪೂರ್ಣ ವಿವರಗಳು

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ ಮಾಡಿ ತಿಳಿಸಿದ ಏಜೆನ್ಸಿ/ಉ.ವಿ.ಕ/ಕ/ಲೋಸೇಆ ಇತರೆ | ಒಟ್ಟು ಹುದ್ದೆಗಳು | ಖಾಲಿ ಸ್ಥಾನಗಳ ವರ್ಗೀಕರಣ ಎ.ಬಿ.ಸಿ.ಡಿ. | | | | | ಒಟ್ಟು ಹಿಂದುಳಿದ ವರ್ಗಗಳ ಸಂಖ್ಯೆ | ಆಯ್ಕೆ ಗೊಂಡ ದಿನಾಂಕ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | | | | | | | |

| ಆಯ್ಕೆಯಾದ ಅಭ್ಯರ್ಥಿಗಳ ವರ್ಗೀಕರಣ | | | | | ಪ್ರಚಲಿತ ಸರ್ಕಾರಿ ಆದೇಶದಂತೆ ನೇಮಕಾತಿ ಮಾಡಬೇಕಾಗಿರುವುದು | | | | | ಮೀಸಲಾತಿಯಲ್ಲಿ ಕೊರತೆ ಬಿದ್ದ ಸ್ಥಾನಗಳು | | | | | ವಿಚಲನೆಗೆ ಸಕಾರಣಗಳು |
|---|---|---|---|---|---|---|---|---|---|---|---|---|---|---|---|
| ಎ | ಬಿ | ಸಿ | ಡಿ | ಇ | ಎ | ಬಿ | ಸಿ | ಡಿ | ಇ | ಎ | ಬಿ | ಸಿ | ಡಿ | ಇ | |
| 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 |
| | | | | | | | | | | | | | | | |

## ನಮೂನೆ -6

## ವಾರ್ಷಿಕ ವರದಿ

(ಎ) ಪ್ರವೇಶಗಳಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳವರಿಗೆ ಸ್ಥಾನಗಳ ಮೀಸಲಾತಿ

| ಶಿಕ್ಷಣ ಸಂಸ್ಥೆಯಾಗಿದ್ದರೆ ಅದರ ಹೆಸರು ಮತ್ತು ವಿಳಾಸ | ಕೋರ್ಸಿನ ಹೆಸರು | ಅನುಮತಿಸಿರುವ ಸ್ಥಾನಗಳ ಒಟ್ಟು ಸಂಖ್ಯೆ | ಅನುಮತಿಸಬೇಕಾಗಿರುವ ಸ್ಥಾನಗಳ ಸಂಖ್ಯೆ (ಸರ್ಕಾರಿ ಆದೇಶದ ಪ್ರಕಾರ) | | ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆ | | ಯಾವುದೇ ಕೊರತೆ ಉಂಟಾಗಿದ್ದರೆ | | ಷರಾ |
|---|---|---|---|---|---|---|---|---|---|
| | | | ಅ.ಜಾ.ಗಳು | ಅ.ಬುಡಕಟ್ಟುಗಳು | ಅ.ಜಾ.ಗಳು | ಅ.ಬುಡಕಟ್ಟುಗಳು | ಅ.ಜಾ.ಗಳು | ಅ.ಬುಡಕಟ್ಟುಗಳು | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ಸಹಿ/-

## [1][ನಮೂನೆ -7
## [ನಿಯಮ 13 ನ್ನು ನೋಡಿ]

**ಪ್ರವೇಶಗಳಲ್ಲಿ ಹಿಂದುಳಿದ ವರ್ಗಗಳಿಗಾಗಿ ಸೀಟುಗಳ ಮೀಸಲಾತಿ**

| ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ | ಕೋರ್ಸಿನ ಹೆಸರು | ಲಭ್ಯವಿರುವ ಸೀಟುಗಳ ಒಟ್ಟು ಸಂಖ್ಯೆ | (ಸರ್ಕಾರಿ ಆದೇಶದ ಪ್ರಕಾರ) ಲಭ್ಯವಿರುವ ಸೀಟುಗಳ ಸಂಖ್ಯೆ | | | | |
|---|---|---|---|---|---|---|---|
| | | | I | IIA | IIB | IIIA | IIIB |
| 1 | 2 | 3 | 4 | 5 | 6 | 7 | 8 |

| ಪ್ರವೇಶಕ್ಕಾಗಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | | | | | ಭರ್ತಿಯಾದ ಸೀಟುಗಳ ಸಂಖ್ಯೆ | | | | |
|---|---|---|---|---|---|---|---|---|---|
| I | IIA | IIB | IIIA | IIIB | I | IIA | IIB | IIIA | IIIB |
| 9 | 10 | 11 | 12 | 13 | 14 | 15 | 16 | 17 | 18 |

| ಪ್ರವೇಶದಲ್ಲಿ ಯಾವುದಾದರೂ ಕೊರತೆ ಇದ್ದರೆ ಅದು | | | | | ಕೊರತೆಗೆ ಕಾರಣಗಳು |
|---|---|---|---|---|---|
| I | IIA | IIB | IIIA | IIIB | |
| 19 | 20 | 21 | 22 | 23 | 24 |

-------------

[2][ಅನುಬಂಧ

**ವಾರ್ಷಿಕ ವರದಿಗಳ ಮಂಡಳಿ**

[ನಿಯಮ 13 ಗಮನಿಸಿ]

| ಕ್ರ.ಸಂ | ಸಂಸ್ಥೆ / ನೇಮಕಾತಿ ಪ್ರಾಧಿಕಾರ | ವರದಿಗಳನ್ನು ಸ್ವೀಕರಿಸುವ ಪ್ರಾಧಿಕಾರಗಳು | ವರದಿ ಸಲ್ಲಿಸಬೇಕಾದ ನಮೂನೆಗಳು |
|---|---|---|---|
| 1 | 2 | 3 | 4 |
| 1 | ಪದವಿಪೂರ್ವ ಮತ್ತು ತತ್ಸಮಾನ ತರಗತಿಯವರೆಗಿನ ಶಿಕ್ಷಣ ಸಂಸ್ಥೆಗಳು | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರೀಕ್ಷಕರು | 6(ಸಮಾಜ ಕಲ್ಯಾಣ ಇಲಾಖೆ)<br>7 (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ) |
| 2 | ಪದವಿಪೂರ್ವಕ್ಕಿಂತ ಮೇಲ್ಪಟ್ಟು ಮತ್ತು ವಿಶ್ವವಿದ್ಯಾನಿಲಯದವರೆಗಿನ ಶಿಕ್ಷಣ ಸಂಸ್ಥೆಗಳು | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ | 6(ಸಮಾಜ ಕಲ್ಯಾಣ ಇಲಾಖೆ)<br>7 (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ) |
| 3 | ರಾಜ್ಯದಲ್ಲಿನ ಎಲ್ಲಾ ವಿಶ್ವವಿದ್ಯಾನಿಲಯಗಳು | ನಿರ್ದೇಶಕರು,<br>ಸಮಾಜ ಕಲ್ಯಾಣ ಇಲಾಖೆ<br>ನಿರ್ದೇಶಕರು<br>ಹಿಂದುಳಿದ ವರ್ಗಗಳ ಇಲಾಖೆ | 6<br>7 |
| 4 | ಗ್ರೂಪ್ 'ಡಿ'ಮಟ್ಟದ ಹುದ್ದೆಗಳ ನೇಮಕಾತಿ ಪ್ರಾಧಿಕಾರಗಳು | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ<br>ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ | 4<br>5 |
| 5 | 'ಸಿ' ವೃಂದದ ನೇಮಕಾತಿ ಪ್ರಾಧಿಕಾರಗಳು | ನಿರ್ದೇಶಕರು,<br>ಸಮಾಜ ಕಲ್ಯಾಣ ಇಲಾಖೆ<br>ನಿರ್ದೇಶಕರು,<br>ಹಿಂದುಳಿದ ವರ್ಗಗಳ ಇಲಾಖೆ | 4<br>5 |
| 6 | ಪತ್ರಾಂಕಿತ ಅಧಿಕಾರಿಗಳ ಹುದ್ದೆಗಳ ನೇಮಕಾತಿ ಪ್ರಾಧಿಕಾರಿಗಳು | ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 4 ಮತ್ತು 5 |

1 ನಮೂನೆ 7 ನ್ನು ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ರ ಮೂಲಕ ದಿನಾಂಕ : 08-02-2000 ರನ್ವಯ ಸೇರಿಸಲಾಗಿದೆ ಮತ್ತು ಜಾರಿಗೆ ಬಂದಿರುತ್ತದೆ.

2 ಅನುಬಂಧವನ್ನು ಅಧಿಸೂಚನೆ ಸಂಖ್ಯೆ : ಸಕಇ 132 ಎಸ್‌ಎಡಿ 97 ರ ಮೂಲಕ ದಿನಾಂಕ : 08-02-2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

/ಸಹಿ/
ಸರ್ಕಾರದ ಉಪಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.